

ಸಪ್ನಾ ಕಟ್ಟಿ

ಕಲೆ: ವೆಂಕಟ್ರಮಣ ಭಟ್

# ಬೇರುಗಳು

“ಇವತ್ತೂ ಬಂದಿಲ್ಲ ನೋಡ್ರಿ ಅಕ್ಕೂತಾಯಿ. ಇವತ್ತಿಗೆ ಮೂರು ದಿನಾ ಆತು ಸೂಟಿ ಮಾಡಿ. ಹಿಂಗ ದಿನಾ ದಿನಾ ತಪ್ಪಿಸಿದ್ರ ನನ್ನ ಗತಿ ಏನು?''

“ಹೋಗಲಿ ಬಿಡು. ಅವರಿಗೂ ಜಡ್ಡು ಜಾಪತ್ತು ಇರತಾವ ಪಾಪ.''

“ಹೌದು ಊರ ಮಂದಿಯ ದೇವರು ನೀವು. ಅಲ್ಲಾ ಆ ಕೆಲಸದ ಅಕ್ಕೂತಾಯಿಯ ಕಾಳಜಿ ಅದ ನಿಮಗ. ಆದ್ರ ಹಗಲೂ ರಾತ್ರಿ ಈ ಅಂಬಕ್ಕತ್ತಿಯ ಸೇವಾ ಮಾಡಿ ಮಾಡಿ ನಾ ಹೈರಾಣಾಗಿದ್ದು ಕಾಣೂದಿಲ್ಲಲ್ಲಾ.''

ಚುಚ್ಚುಮಾತುಗಳ ಶೃಂಖಲೆ ಶುರುವಿಟ್ಟುಕೊಂಡಿದ್ದ ಸಂಕೇತ ಸಿಕ್ಕು ಕೇಶವ ಸೀದಾ ಅಂಗಳಕ್ಕೆ ಬಂದು ಮಾವಿನಮರದ ಬುಡದ ಈಸಿಚೇರಿನಲ್ಲಿ ಅಡ್ಡಾದ. ಒಣಗಿ ನಿಂತ ಶಾಖೆಗಳ ಛಾಯೆ ಹರಿದ ಚಾಪೆಯಂತೆ ಗೆರೆಗೆರೆಯಾಗಿ ಪಸರಿಸಿತ್ತು, ಆದರೂ ಆ ತುಣುಕು ನೆರಳಲ್ಲೇ ಸುಖದ ಛವಿ ಕಂಡಂತಾಗುತ್ತದೆ ಕೇಶವನಿಗೆ. ಮರದ ನೆರಳು ಬೆನ್ನ ಮೇಲಾಡಿದಾಗ, ಚಾಕಲೇಟು ಚಪ್ಪರಿಸಿದ ಮಗು ಏಟು ಮರೆತಂತೆ ಬಾಲ್ಯದ ಸವಿ ನೆನಪುಗಳು ಒಂದೊಂದಾಗಿ ಮನಸ್ಸಿಗೆ ಬಂದು ಅವುಗಳ ಸವಿ ಮನಸೋಕ್ತ ಈಂಟಿ ಬರುವಾಗ ಮತ್ತೆ ಹೊಸ ಮನುಷ್ಯನವ.

ಆದರಿಂದು ಅದೂ ಸಾಧ್ಯವಾಗುವ ಲಕ್ಷಣ ಕಾಣಲಿಲ್ಲ ಅವನಿಗೆ.

“ಅಲ್ಲಾ ಇವರ ಕಡೆ ಸೇವಾ ಮಾಡಿಸಿಕೊಂಡವರು ನೀವು, ನಿಮ್ಮಪ್ಪ, ನಿಮ್ಮವ್ವ. ಗೇಯಬೇಕಾದವಳು ಮಾತ್ರ ನಾ. ಇದೆಲ್ಲಿ ನ್ಯಾಯ ಅಂತೇನಿ? ಅದೂ ಅಲ್ಲದೆ ಏನು ಹಡದ ಅವ್ವನ ಇಕೀ? ಹಿಂಗ ಯಾರಾರಿಗೋ ಮಾಡಲಿಕ್ಕೆ ನನಗೇನು ಕರ್ಮ?''

ನಾಲ್ವತ್ತು ಫೂಟು ದೂರಕ್ಕೂ ನಿಮ್ಮಿಯ ಕರ್ಕಶ ಮಾತುಗಳು ಕರ್ಣ ಛೇದಿಸುವಷ್ಟು ಸ್ಫುಟವಾಗಿದ್ದವು. ಹಡೆದರಷ್ಟೇ ತಾಯಿಯೇ. ಅಂಬಕ್ಕತ್ತಿ ಕೈತುತ್ತಿ ಉಣಿಸಿ ಬೆಳೆಸದೆ ನನ್ನೀ ಆರು ಫೂಟಿನ ದೇಹ ಇಷ್ಟು ಬಲಿಯಿತೆ? ತಾ ಬೆಳಗಾವಿಯಲ್ಲಿದ್ದು ಪಿಯುಸಿ ಕಲಿಯಬೇಕಾಗಿ ಬಂದಾಗ ತನಗೆ ಊಟಕ್ಕೆ ತ್ರಾಸಾಗಬಾರದೆಂದು ಅಲ್ಲಿಯೇ ಎರಡು ವರ್ಷ ಮನೆ ಮಾಡಿಕೊಂಡಿದ್ದು ನನಗಾಗಿ ಎಷ್ಟು ಕಷ್ಟಪಟ್ಟಳು ಅತ್ತಿ? “ನಮ್ಮವರು ಯುನಿವರ್ಸಿಟಿಯಲ್ಲಿ ಇಂಗ್ಲಿಷ್ ಪ್ರೊಫೆಸರು” ಅಂತ ಬೀಗುತ್ತಾ ತನ್ನ ಗೆಳತಿಯರಿಗೆ ಪರಿಚಯಿಸುವಾಗ ನಿಮ್ಮಿಗೆ ಇದೆಲ್ಲಾ ಯಾಕೆ ನೆನಪಾಗುವುದಿಲ್ಲ? ಅವಳು ಗಟ್ಟಿಯಾಗಿದ್ದಾಗ ತನ್ನ ಬಸಿರು ಬಾಣಂತನ ಎಲ್ಲ ಮಾಡಿಸಿಕೊಂಡವಳಿಗೆ ಈಗ ಕೈಕಾಲಿನ ಶಕ್ತಿ ಕಳಕೊಂಡು ಸರಿಯುವ ಅತ್ತಿ ಹೊರೆಯಾಗಿದ್ದಾಳೆ. ಶ್ರಾವಿಯಾದರೂ ಅಜ್ಜಿ ಅಜ್ಜಿ ಅಂತ